**ಸಾಕ್ಷಿಗೆ ದಿನಾಂಕಃ 30.11.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಃಶ್ರೀ. ಹೆಚ್ ಆರ್ ಯು ವಕೀಲರಿಂದ**

ನನ್ನ ತಂದೆ ತಿಮ್ಮಪ್ಪ ಗೌಡ ನನ್ನ ತಾಯಿ ಸಾವಿತ್ರಮ್ಮ. ಅವರು ಈಗ ತೀರಿಕೊಂಡಿರುತ್ತಾರೆ. ನನ್ನ ತಂದೆಯ ಮನೆ ತೀರ್ಥಹಳ್ಳಿ ತಾಲ್ಲೂಕು, ಮಂಡಗದ್ದೆ ಗ್ರಾಮ, ಮಲ್ಲಾಪುರ ಗ್ರಾಮದ ಜಡ್ಡಿನ ಗದ್ದೆ ಎಂದರೆ ಸರಿ. ನನ್ನ ತಂದೆ-ತಾಯಿ ಕೃಷಿಕರಾಗಿರುತ್ತಾರೆಂದರೆ ಸರಿ. ನನ್ನ ತಂದೆ-ತಾಯಿಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ತಂದೆ-ತಾಯಿಗೆ 3 ಜನ ಹೆಣ್ಣು ಮಕ್ಕಳು 1 ಗಂಡು ಮಗ ಎಂದರೆ ಸರಿ. ನನ್ನ ಸಹೋದರನ ಹೆಸರು ಶಿವಮೂರ್ತಿ ಎಂದರೆ ಸರಿ. ಈಗ ಶಿವಮೂರ್ತಿ ಇರುವುದಿಲ್ಲ, ತೀರಿಕೊಂಡಿರುತ್ತಾರೆ. ನನ್ನ ಸಹೋದರ ತನ್ನ ಮದುವೆ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ-ತಾಯಿ ಹಾಗೂ ಸಹೋದರ ತೀರಿಕೊಂಡ ನಂತರ ಎಲ್ಲಾ ಆಸ್ತಿಗಳು ನನಗೆ ಮತ್ತು ನನ್ನ ಸಹೋದರಿಯರಿಗೆ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಮತ್ತು ಇನ್ನೊಬ್ಬ ಸಹೋದರಿಗೆ 16 ಎಕರೆ ಬಂದಿದ್ದು, ನಮ್ಮ ನಮ್ಮ ಭಾಗವನ್ನು ಮಾರಾಟ ಮಾಡಿ ನಮಗೆ ಮದುವೆ ಮಾಡಿರುತ್ತಾರೆ. ಇನ್ನುಳಿದ ಆಸ್ತಿ ನನ್ನ ಇನ್ನೊಬ್ಬ ಸಹೋದರಿಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ತೀರ್ಥಹಳ್ಳಿ ತಾಲ್ಲೂಕು, ಮಂಡಗದ್ದೆ ಹೋಬಳಿ ಮಲ್ಲಾಪುರ ಗ್ರಾಮದಲ್ಲಿ ನನಗೆ ಸಹೋದರಿಯರ ಒಟ್ಟಿಗೆ 3 ಎಕರೆ 31 ಗುಂಟೆ ಸ.ನಂಃ31/2 ರಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಆಸ್ತಿಗೆ ಸಂಬಂಧಿಸಿ ಆರ್ ಟಿ ಸಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣಿಸಿದ ಆಸ್ತಿಗಳನ್ನು ಹೊರತುಪಡಿಸಿ ಅದೇ ಗ್ರಾಮದಲ್ಲಿ ಮತ್ತು ಬೇರೆ ಬೇರೆ ಗ್ರಾಮಗಳಲ್ಲಿ ನಮಗೆ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಬೇರೆ ಬೇರೆ ಆಸ್ತಿಗಳು ನಮ್ಮ ಹೆಸರಿನಲ್ಲಿದ್ದು ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತೀರ್ಥಹಳ್ಳಿ ತಾಲ್ಲೂಕು, ಮಲ್ಲಾಪುರ ಗ್ರಾಮ ಅಡಿಕೆ ಬೆಳೆಗೆ ಪೂರಕವಾದ ಜಾಗ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ಕಾಣಿಸಿದ ದಾಖಲೆಯಲ್ಲಿ ಆಸ್ತಿಯಿಂದ ನಮಗೆ ವಾರ್ಷಿಕವಾಗಿ 10-15 ಲಕ್ಷ ವರಮಾನ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 20 ಸಾವಿರ ಆದಾಯ ಸಹ ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ವಿವಾಹ ದಿನಾಂಕಃ16.07.2003 ರಂದು ತೀರ್ಥಹಳ್ಳಿ ಪಟ್ಟಣದ ರಥಬೀದಿಯಲ್ಲಿ ರಾಮೇಶ್ವರ ದೇವಸ್ಥಾನದಲ್ಲಿ ತಿಮ್ಮಪ್ಪ ರವರ ಜೊತೆ ಆಗಿರುತ್ತದೆ ಎಂದರೆ ಸರಿ. ತಿಮ್ಮಪ್ಪ ಹಾಗೂ

ನನ್ನ ವೈವಾಹಿಕ ಜೀವನದಿಂದ ನನಗೆ ಒಂದು ಹೆಣ್ಣು ಮಗು ಆಗಿರುತ್ತದೆ ಎಂದರೆ ಸರಿ. ಸದರಿಯವರ ಹೆಸರು ನಾಗಶ್ರೀ ಎಂದರೆ ಸರಿ. ಸದರಿ ನನ್ನ ಮಗಳು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ತಿಮ್ಮಪ್ಪ ರವರೊಂದಿಗೆ ನನಗೆ ದಿನಾಂಕಃ 16.07.2003 ರಲ್ಲಿ ಆಗಿರುವ ವಿವಾಹ ದಿನಾಂಕಃ11.04.2017 ರವರೆಗೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ನಂತರ ನಾನು ನನ್ನ ಪತಿ ತಿಮ್ಮಪ್ಪ ರವರ ವಿರುದ್ಧ ಶಿವಮೊಗ್ಗದ ಕೌಟುಂಬಿಕ ನ್ಯಾಯಾಲಯ ಹಾಗೂ ತೀರ್ಥಹಳ್ಳಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿ. ತೀರ್ಥಹಳ್ಳಿ ಹಿರಿಯ ಶ್ರೇಣಿ ನ್ಯಾಯಾಲಯಿದಲ್ಲಿ ನನ್ನ ಹಾಗೂ ತಿಮ್ಮಪ್ಪ ರವರ ನಡುವೆ ಆಗಿರುವ ಮದುವೆ ಕುರಿತು ವಿಚ್ಛೇಧನ ಆಗಿರುತ್ತದೆ ಎಂದರೆ ಸರಿ.

ನನ್ನ ಗಂಡ ತಿಮ್ಮಪ್ಪ ತೀರ್ಥಹಳ್ಳಿ ತಾಲ್ಲೂಕು, ಬಂಧ್ಯಾ ಗ್ರಾಮದ ನಿವಾಸಿಯಾಗಿರುತ್ತಾರೆಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ದಿನಾಂಕಃ 30.11.2022 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**